# ಕುವೆಂಪು ವಿಶ್ವವಿದ್ಯಾಲಯ

## 2023–24ನೇ ದ್ವಿತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳು

## ಸಭಾ ದಿನಾಂಕ:18–01–2024

ಹಣಕಾಸು ವಿಭಾಗ

ಜ್ಞಾನಸಹ್ಯಾದ್ರಿ, ಶತಮಾನೋತ್ಸವ ಭವನ, ಶಂಕರಘಟ್ಟ – 577 451, ಶಿವಮೊಗ್ಗ ಜಿಲ್ಲೆ

# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:18-01-2024ರಂದು ಗುರುವಾರ ಅಪರಾಹ್ನ 3-30 ಘಂಟೆಗೆ ವಿಶ್ವವಿದ್ಯಾಲಯದ ಶತಮಾನೋತ್ಸವ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ಆನ್-ಲೈನ್ ಮೂಲಕ ನಡೆದ 2023-24ನೇ ಆರ್ಥಿಕ ವರ್ಷದ ದ್ವಿತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳು.

| ಹಾಜರಾದ ಸದಸ್ಯರು: | ಪದನಾಮ |
|---|---|
| 1. **ಪ್ರೊ. ಎಸ್. ವೆಂಕಟೇಶ್**<br>ಮಾನ್ಯ ಕುಲಪತಿಗಳು (ಪ್ರಭಾರ) | ಅಧ್ಯಕ್ಷರು |
| 2. **ಶ್ರೀಮತಿ ಉಮಾ. ಕೆ**<br>ಜಂಟಿ ಕಾರ್ಯದರ್ಶಿಗಳು<br>ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ,<br>ವಿಧಾನಸೌಧ, ಬೆಂಗಳೂರು | ಸದಸ್ಯರು |
| 3. **ಶ್ರೀ ಕುಮಾರ್**<br>ಸರ್ಕಾರದ ಉಪಕಾರ್ಯದರ್ಶಿಗಳು<br>(ತಾಂತ್ರಿಕ ಶಿಕ್ಷಣ ಮತ್ತು ಯೋಜನೆ)<br>ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ<br>ಬೆಂಗಳೂರು. | ಸದಸ್ಯರು |
| 4. **ಶ್ರೀ ಗುರುರಾಜ್ ರಾವ್**<br>ಹಿರಿಯ ನಿರ್ದೇಶಕರು ಹಾಗೂ<br>ಪದನಿಮಿತ್ತ ಜಂಟಿ ಕಾರ್ಯದರ್ಶಿ<br>ಯೋಜನಾ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ<br>ಬೆಂಗಳೂರು. | ಸದಸ್ಯರು |
| 5. **ಶ್ರೀ ಶಶಿಧರ್. ಟಿ. ಎನ್**<br>ಸಿಂಡಿಕೇಟ್ ಸದಸ್ಯರು | |
| 6. **ಶ್ರೀ ಕುಮಾರೇಗೌಡ**<br>ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು | ಸದಸ್ಯರು |
| 7. **ಶ್ರೀ ಸ್ನೇಹಲ್ ಸುಧಾಕರ ಲೋಖಂಡೆ,** ಐ.ಎ.ಎಸ್.<br>ಕುಲಸಚಿವರು (ಆಡಳಿತ) | |
| 8. **ಪ್ರೊ. ಗೋಪಿನಾಥ್. ಎಸ್. ಎಂ.**<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 9. **ಶ್ರೀ. ಟಿ. ಬಂಗಾರಪ್ಪ.** ಕೆ.ಎಸ್.ಎ.ಎಸ್.<br>ಹಣಕಾಸು ಅಧಿಕಾರಿ | ಸದಸ್ಯ ಕಾರ್ಯದರ್ಶಿಗಳು |

-2

ಪ್ರಸ್ತಾವನೆ:

ಪ್ರಾರಂಭದಲ್ಲಿ, ಹಣಕಾಸು ಅಧಿಕಾರಿಗಳು 2023-24ನೇ ಸಾಲಿನ ಆರ್ಥಿಕ ವರ್ಷದ ದ್ವಿತೀಯ ಆನ್‌ಲೈನ್ ಮೂಲಕ ಮಾನ್ಯ ಕುಲಪತಿಗಳಿಗೆ ಮತ್ತು ಇತರೆ ಸದಸ್ಯರುಗಳಿಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಕಾರ್ಯಸೂಚಿಯ ಪ್ರಮುಖ ವಿಷಯಗಳ ಬಗ್ಗೆ ಸಂಕ್ಷಿಪ್ತವಾಗಿ ಸಭೆಗೆ ವಿವರಿಸಿದರು. ನಂತರ ಸಭೆಯ ಅಧ್ಯಕ್ಷರ ಅನುಮತಿಯನ್ನು ಪಡೆದು ಸಭಾ ಕಾರ್ಯಸೂಚಿಯಂತೆ ಕಾರ್ಯಕಲಾಪಗಳನ್ನು ಕೈಗೆತ್ತಿಕೊಳ್ಳಲಾಯಿತು.

| | |
|---|---|
| 2023-ಹಸ:2:01 | ದಿನಾಂಕ:09-11-2023ರಂದು ನಡೆದ 2023-24ನೇ ಹಣಕಾಸು ವರ್ಷದ ಪ್ರಥಮ ಹಣಕಾಸು ಸಮಿತಿ ಸಭೆಯ ನಡಾವಳಿಗಳ ದೃಢೀಕರಣ |
| ನಿರ್ಣಯ: | ದಿನಾಂಕ:09-11-2023ರಂದು ನಡೆದ 2023-24ನೇ ಹಣಕಾಸು ವರ್ಷದ ಪ್ರಥಮ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಪರಿಶೀಲಿಸಿ ದೃಢೀಕರಿಸಿತು. |
| 2023-ಹಸ:2:02 | ದಿನಾಂಕ: 09-11-2023ರಂದು ನಡೆದ 2023-24ನೇ ಹಣಕಾಸು ವರ್ಷದ ಪ್ರಥಮ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿ. |
| ನಿರ್ಣಯ: | ದಿನಾಂಕ:09-11-2023ರಂದು ನಡೆದ 2023-24ನೇ ಹಣಕಾಸು ವರ್ಷದ ಪ್ರಥಮ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿಯನ್ನು ಸಭೆಯು ಅನುಮೋದಿಸಿತು. |
| 2023-ಹಸ:2:03 | ಕುವೆಂಪು ವಿಶ್ವವಿದ್ಯಾನಿಲಯದ 2024-2025ನೇ ಸಾಲಿನ ವೇತನ ಭತ್ಯೆಗಳಿಗೆ ಸಂಬಂಧಿಸಿದ ಅಂದಾಜು ಆಯ-ವ್ಯಯದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುವ ಕುರಿತು. |
| ನಿರ್ಣಯ: | ಕುವೆಂಪು ವಿಶ್ವವಿದ್ಯಾನಿಲಯದ 2024-2025ನೇ ಸಾಲಿನ ವೇತನ ಭತ್ಯೆಗಳಿಗೆ ಸಂಬಂಧಿಸಿದಂತೆ ಆಯ-ವ್ಯಯವನ್ನು ಘನ ಸರ್ಕಾರಕ್ಕೆ ಸಲ್ಲಿಸಿದ ಪ್ರಸ್ತಾವನೆಯನ್ನು ಸಭೆಯ ಅವಗಾಹನೆಗೆ ತಂದರು. ವಿಶ್ವವಿದ್ಯಾಲಯದ ಆಯ-ವ್ಯಯವನ್ನು 2024-2025ನೇ ಸಾಲಿನ ವೇತನ ಭತ್ಯೆಗಳಿಗೆ ಸಂಬಂಧಿಸಿದ ಒಟ್ಟಾರೆ ರೂ.18177.09 ಲಕ್ಷಗಳಿಗೆ ಅಂದಾಜು ಆಯ-ವ್ಯಯವನ್ನು ಸಭೆಯು ಕೂಲಂಕಷವಾಗಿ ಪರಿಶೀಲಿಸಿ ಅವಲೋಕಿಸಿತು. |
| 2023-ಹಸ:2:04 | 2023-24ನೇ ಆರ್ಥಿಕ ವರ್ಷದ ಏಪ್ರಿಲ್-2023 ರಿಂದ ಡಿಸೆಂಬರ್ -2023 ರವರೆಗಿನ ಸ್ವೀಕೃತಿ ಮತ್ತು ವೆಚ್ಚಗಳ ಅವಗಾಹನೆಗಾಗಿ. |
| ನಿರ್ಣಯ: | 2023-24ನೇ ಆರ್ಥಿಕ ವರ್ಷದ ಏಪ್ರಿಲ್-2023 ರಿಂದ ಡಿಸೆಂಬರ್ -2023 ರವರೆಗಿನ ಸ್ವೀಕೃತಿ ಮತ್ತು ವೆಚ್ಚಗಳನ್ನು ಹಣಕಾಸು ಅಧಿಕಾರಿಗಳು ಸಭೆಯ ಅವಗಾಹನೆಗೆ ತಂದರು. 2023-24ನೇ ಆರ್ಥಿಕ ವರ್ಷದ ಏಪ್ರಿಲ್-2023 ರಿಂದ ಡಿಸೆಂಬರ್-2023 ರವರೆಗಿನ , ಸ್ವೀಕೃತಿ ರೂ.12264.71 ಲಕ್ಷ ಹಾಗೂ ವೆಚ್ಚ ರೂ.10966.6 ಲಕ್ಷಗಳನ್ನು ಸಭೆಯು ಅವಲೋಕಿಸಲಾಯಿತು. |
| 2023-ಹಸ:2:05 | **2023-24ನೇ ಹಣಕಾಸು ವರ್ಷದ ಆಯ-ವ್ಯಯದ ಪುನರ್ ಧನವಿನಿಯೋಗ (ಮರುಹೊಂದಾಣಿಕೆ) ಮತ್ತು ಪೂರಕ ಅನುದಾನ ಕುರಿತು.** |
| ನಿರ್ಣಯ: | 2023-24ನೇ ಹಣಕಾಸು ವರ್ಷದ ಆಯ-ವ್ಯಯದಲ್ಲಿ ಕೊರತೆಯಾಗಿರುವ ಅನುದಾನವನ್ನು ಜ್ಞಾನ ಸಹ್ಯಾದ್ರಿಯ ಶೀರ್ಷಿಕೆ, 1 ಎ. ಡಿ.14.1, 1ಎಡಿ.14.4 ಮತ್ತು 1ಎಡಿ.5.4, ಶೀರ್ಷಿಕೆಗಳಿಗೆ 1 ಎಡಿ14.14,ಶೀರ್ಷಿಕೆಯಿಂದ ರೂ. 8,50,000/-ಲಕ್ಷಗಳು ಹಾಗೂ 1ಎಸಿ7.2.7.3, 1ಎಸಿ3.2, 1ಎಸಿ5.18 1ಎಸಿ5.19 ಮತ್ತು 4ಎಸಿ.3.2 ಶೀರ್ಷಿಕೆಗಳಿಗೆ 1ಎಸಿ.4.5ಶೀರ್ಷಿಕೆಯಿಂದ ರೂ. 13,63,000/-ಲಕ್ಷಗಳು ಒಟ್ಟಾರೆ ರೂ.22,13,000/-ಲಕ್ಷಗಳನ್ನು ಪ್ರಪತ್ರ-22ಎ (ಅನುಚ್ಛೇದ-308, ಕೆ.ಎಫ್.ಸಿ)ರ ಪ್ರಕಾರದಂತೆ ಪುನರ್ ಧನ ವಿನಿಯೋಗ ಮಾಡಿಕೊಳ್ಳಲು ಸಭೆಯು ಅನುಮೋದನೆ ನೀಡಿತು. |

| | |
|---|---|
| 2023–ಹಸ:2:06 | **ವಿಶ್ವವಿದ್ಯಾಲಯ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಗಳಿಗೆ ಸಿದ್ಧಪಡಿಸಿದ ಅನುಪಾಲನಾ ವರದಿಯನ್ನು ಅಡ್ ಹಾಕ್ ಸಮಿತಿಗೆ ಮಂಡಿಸಲು ಅನುಮೋದನೆ ನೀಡುವ ಬಗ್ಗೆ.** |
| ನಿರ್ಣಯ: | ವಿಶ್ವವಿದ್ಯಾಲಯ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಗಳಿಗೆ ಸಿದ್ಧಪಡಿಸಿದ ಅನುಪಾಲನಾ ವರದಿಯನ್ನು ಅಡ್ ಹಾಕ್ ಸಮಿತಿಗೆ ಮಂಡಿಸಲು ಅನುಮೋದನೆಯನ್ನು ನೀಡಲು ಸಭೆಯನ್ನು ಹಣಕಾಸು ಅಧಿಕಾರಿಗಳು ಕೋರಿದರು ಹಾಗೂ 1987–88ರಿಂದ 2020–21ರವರೆಗಿನ ವರದಿಗಳಲ್ಲಿ ವಸೂಲಾತಿ ಸೂಚಿಸಲಾದ ಮೊತ್ತದಲ್ಲಿ ಈವರೆಗೆ ವಸೂಲಾತಿ ಮಾಡಲಾದ ಮೊತ್ತ ರೂ.1,68,89,024/– ಪ್ಯಾರಾಗಳನ್ನು ಹಾಗೂ 2007–08 ರಿಂದ 2016–17ರವರೆಗಿನ 10 ವರ್ಷಗಳ ಅನುಪಾಲನಾ ವರದಿಗಳಿಗೆ ಲೆಕ್ಕ ಪರಿಶೋಧಕರು ಪರಿಶೀಲಿಸಿ ತಿರುವಳಿಗೆ ಅಭಿಪ್ರಾಯ ನೀಡಿದ್ದು, ಒಟ್ಟು 45 ಆಕ್ಷೇಪಣೆ ಕಂಡಿಕೆಗಳ ಮೊತ್ತ ರೂ.40,55,27,227/– ಮತ್ತು 46 ವಸೂಲಾತಿ ಕಂಡಿಕೆಗಳ ಮೊತ್ತ ರೂ. 69,56,811/–ಗಳ ವರದಿಯನ್ನು ಮಂಡಿಸಲು ಅನುಮೋದಿಸಲಾಯಿತು.<br><br>ನಂತರ ಹಣಕಾಸು ಅಧಿಕಾರಿಗಳು 2017–18ರಿಂದ 2020–21ರವರೆಗಿನ 04 ವರ್ಷಗಳ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಗಳಿಗೆ ಅನುಪಾಲನಾ ವರದಿಯನ್ನು ಸಿದ್ಧಪಡಿಸಿಕೊಂಡಿದ್ದು ಪೂರ್ವಭಾವಿ ಪರಿಶೀಲನೆಗೆ ಅಪರ ನಿರ್ದೇಶಕರು ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆಗೆ ಕೋರಲಾಗಿದ್ದು, ಈ ವರದಿಗಳನ್ನು ಸಹ ಅಡ್ ಹಾಕ್ ಸಮಿತಿ ಮಂಡಿಸಲು ಕೋರಿದರು. ಸಭೆಯು ಅನುಮತಿಸಿತು. |
| 2023–ಹಸ:2:07 | **ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು.** |
| 2:7.1 | **2023–24ರಿಂದ ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಗಳನ್ನು ಚಾರ್ಟರ್ಡ್ ಅಕೌಂಟೆಂಟ್ ಇವರಿಂದ ದೃಢೀಕರಿಸುವ ಕುರಿತು** |
| ನಿರ್ಣಯ | 2023–24ರಿಂದ ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಗಳನ್ನು ಚಾರ್ಟರ್ಡ್ ಅಕೌಂಟೆಂಟ್‌ಯವರಿಂದ ದೃಢೀಕರಿಸಿಕೊಳ್ಳಲು ಸಭೆಯನ್ನು ಹಣಕಾಸು ಅಧಿಕಾರಿಗಳು ಸಭೆಯನ್ನು ಕೋರಿದರು. ಸಭೆಯು ಅವಗಾಹಿಸಿ ಅನುಮೋದನೆಯನ್ನು ನೀಡಿತು. |
| 2:7.2 | **ವಾಹನ ಚಾಲಕರ ವೇತನವನ್ನು ಪಾವತಿಸುವ ಕುರಿತು.** |
| ನಿರ್ಣಯ | ಹಣಕಾಸು ಅಧಿಕಾರಿಗಳು ವಾಹನ ಚಾಲಕರ ವೇತನವನ್ನು ಪಾವತಿಸುವ ಬಗ್ಗೆ ಪ್ರಸ್ತಾಪಿಸಿದರು. ಈಗಾಗಲೇ 05 ತಿಂಗಳ ಕರ್ತವ್ಯ ನಿರ್ವಹಿಸಿದ್ದು, ವೇತನ ಪಾವತಿಸಬೇಕಾಗಿರುವುದರಿಂದ ಈ ಹಿಂದಿನ ವೇತನವನ್ನು ಮುಂದುವರಿಸಿ ವಿಶ್ವವಿದ್ಯಾಲಯದ ಹೊರಗುತ್ತಿಗೆ ಟೆಂಡರ್‌ನಲ್ಲಿ ವಾಹನ ಚಾಲಕರ ಹುದ್ದೆಗಳನ್ನು ಸೇರ್ಪಡೆ ಮಾಡಿಕೊಂಡು ಟೆಂಡರ್ ಕರೆಯುವ ಕುರಿತು ಚರ್ಚಿಸಲಾಯಿತು.<br><br>ಸಭೆಯು ಸುಧೀರ್ಘವಾಗಿ ಚರ್ಚಿಸಿ ಇದೊಂದು ಬಾರಿ ಮಾತ್ರ ಮುಂದುವರಿಸಿ ವಿಶ್ವವಿದ್ಯಾಲಯದ ಹೊರಗುತ್ತಿಗೆ ನೌಕರರ ಟೆಂಡರ್‌ನಲ್ಲಿ ಸೇರ್ಪಡೆಗೊಳಿಸಲು ಸಭೆಯು ಸೂಚಿಸಿ ಅನುಮೋದಿಸಿತು. |

ಅಂತಿಮವಾಗಿ, ಸಭೆಗೆ ಆಗಮಿಸಿ ತಮ್ಮ ಅತ್ಯಮೂಲ್ಯ ಸಲಹೆ/ ಸಹಕಾರಗಳನ್ನು ನೀಡಿದ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರುಗಳಿಗೆ ಹಣಕಾಸು ಅಧಿಕಾರಿಗಳು ವಂದಿಸಿದ ನಂತರ ಸಭೆಯು ಮುಕ್ತಾಯಗೊಂಡಿತು.

| | |
|---|---|
| (ಶ್ರೀ ಜಿ. ಬಂಗಾರಪ್ಪ ಕೆ.ಎಸ್.ಎ.ಎಸ್.) | ಸಹಿ/– |
| **ಹಣಕಾಸು ಅಧಿಕಾರಿ ಹಾಗೂ ಸದಸ್ಯ ಕಾರ್ಯದರ್ಶಿಗಳು** | **(ಪ್ರೊ. ಎಸ್. ವೆಂಕಟೇಶ್)** |
| | **ಕುಲಪತಿಗಳು ಹಾಗೂ ಅಧ್ಯಕ್ಷರು** |